ಓ.ಎಸ್. ನಂಃ 233/2020
ಪಿ.ಡಬ್ಲ್ಯೂ-2 (ಬೀರಪ್ಪ)

ದಿನಾಂಕ: 01-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎಸ್.ಜಿ.ಟಿ. 1ನೇ ಪ್ರತಿವಾದಿ ಪರ ವಕೀಲರಿಂದಃ</u>**

ಬಾಳವ್ವ ತಂದೆ ಅಪ್ಪೋಜಪ್ಪ ಕುರಬೇಟ ಇವರು ದಿಃ 20/12/1948 ರಂದು ಅವರು 04 ವರ್ಷದವರಿದ್ದಾಗ ಕಾಲ್ರಾ ರೋಗದಿಂದ ಮೃತಪಟ್ಟಿರುತ್ತಾರೆ ಎಂದು ಅವರ ಮರಣ ಪ್ರಮಾಣ ಪತ್ರದ ಆಧಾರದ ಮೇಲೆ ಬರೆಯಿಸಿರುತ್ತೇನೆ. ನಿಪಿ-34 ರಲ್ಲಿ ಬಾಳವ್ವ ತಂದೆ ಅಪ್ಪೋಜಪ್ಪ ಕುರಬೇಟ ಇವರು 04 ವರ್ಷದವರಿದ್ದಾಗ ಕಾಲ್ರಾ ರೋಗದಿಂದ ಮೃತಪಟ್ಟಿರುತ್ತಾರೆ ಎಂದು ಬರೆದಿಲ್ಲ. ಬಾಳವ್ವ ತಂದೆ ಅಪ್ಪೋಜಪ್ಪ ಕುರಬೇಟ ಇವರು ದಿಃ 20/12/1948 ರಂದು ಅವರು 04 ವರ್ಷದವರಿದ್ದಾಗ ಕಾಲ್ರಾ ರೋಗದಿಂದ ಮೃತಪಟ್ಟಿರುತ್ತಾರೆ ಎಂದು ಯಾವುದೇ ದಾಖಲೆಯನ್ನು ನೋಡಿಲ್ಲ. ನಿಪಿ-34ನ್ನು ನಾನು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. ನಿಪಿ-32 ರ ಪ್ರಕಾರ ಓ.ಎಸ್.ನಂ.543/2021 ರಲ್ಲಿ ನಾವು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಬಾಳವ್ವ ತಂದೆ ಅಪ್ಪೋಜಪ್ಪ ಕುರಬೇಟ ಇವರು ದಿಃ20/12/1948 ರಂದು ಅವರು 04 ವರ್ಷದವರಿದ್ದಾಗ ಕಾಲ್ರಾ ರೋಗದಿಂದ ಮೃತಪಟ್ಟಿರುತ್ತಾರೆ ಎಂದು ಬರೆಯಿಸಿಲ್ಲ ಎಂದರೆ ಸರಿ. ನಿಪಿ-34 ರಲ್ಲಿ ಮೃತರ ಖಾಯಂ ವಿಳಾಸ ಮತ್ತು ಮೃತ ಪಡುವಾಗ ಇದ್ದ ವಿಳಾಸ ನಮೂದಿಸಿಲ್ಲ ಎಂದರೆ

ಸದರಿ ದಾಖೆಯನ್ನು ಮಾಯವ್ವ ಭೀಮಪ್ಪ ಹಾಲನ್ನವರ ಇವರು ಸೃಷ್ಟಿ ಮಾಡಿಕೊಂಡ ದಾಖಲೆ ಎಂದು ಹೇಳುತ್ತಾರೆ.

3. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಬಾಳವ್ವ ಅಪ್ಪೋಜಪ್ಪ ಕುರಬೇಟ ಇವರ ಮರಣ ಪ್ರಮಾಣ ಪತ್ರ ತೆಗೆಯಿಸಿರಲಿಲ್ಲ. ಈ ದಾವೆಯಲ್ಲಿ ಪಿ.ಡಬ್ಲ್ಯೂ-1 ಹಾಗೂ ನನ್ನ ಸಾಕ್ಷಿ ಆದ ನಂತರ ನಾವು ಬಾಳವ್ವ ಅಪ್ಪೋಜಪ್ಪ ಕುರಬೇಟ ಇವರ ಮರಣ ಪ್ರಮಾಣ ಪತ್ರ ನಿಪಿ-34 ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿದಾರರು ಅದು ತಹಸೀಲ್ದಾರರು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

4. ನಿಪಿ-35ರ ಪ್ರಕಾರ ದಿಃ29/11/2025 ರಂದು ನಾವು ಉಪ-ತಹಸೀಲ್ದಾರ ಚಂದರಗಿ ಇವರಿಗೆ ಅರ್ಜಿ ಕೊಟ್ಟಿದ್ದೆವು ಎಂದರೆ ಸರಿ. ನಿಪಿ-35 ರ ಅರ್ಜಿ ವಜಾ ಆಗಿದೆ ಎಂದು ಸೂಚಿಸಿದರೆ ಸಾಕ್ಷಿದಾರರು ಯಮನವ್ವ ಅಡಿವೆಪ್ಪ ಕರೆನ್ನವರ ಇವರಿಗೆ ನೇರ ವಾರಸುದಾರರು ಯಾರು ಇಲ್ಲ ಎಂದು ಹೇಳಿ ಹಿಂಬರಹ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಿಪಿ-35ರ ಅರ್ಜಿಯನ್ನು ಮೀಸಲಾತಿ ಕೋರಿ ಸಲ್ಲಿಸಲಾಗಿತ್ತು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿದಾರರು ತಮ್ಮ ತಂದೆ ಯಮನವ್ವ ಇವರ ವಾರಸುದಾರರು ಎಂದು ಹೇಳಿ ಅರ್ಜಿ ಕೊಟ್ಟಿದ್ದಾಗಿ ಹೇಳುತ್ತಾರೆ. ಆ ರೀತಿ ಬರೆಯಿಸಿಲ್ಲ ಎಂದರೆ ಸರಿಯಲ್ಲ.

5. ಹಿರೇಕೊಪ್ಪ ಗ್ರಾಮದಲ್ಲಿ ತಲಾಟಿ ಇವರ ಕಚೇರಿ ಇದೆ ಎಂದರೆ ಸರಿ. ದಿನಾಂಕ 26/11/2021 ರಂದು ಹಿರೇಕೊಪ್ಪ ಗ್ರಾಮದ ತಲಾಟಿ ಯಾರು ಇದ್ದರು

ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಚಿಕ್ಕೊಪ್ಪ ಗ್ರಾಮ ಲೆಕ್ಕಾಧಿಕಾರಿಗಳು ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕೊಪ್ಪ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಕಚೇರಿ ಇಲ್ಲದೇ ಇದ್ದರೂ ಸಹ ಸದರಿ ದಾಖಲೆಯನ್ನು ನಾವು ಸೃಷ್ಟಿ ಮಾಡಿಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ.

6. ನಾನು ಹಾಜರಪಡಿಸಿರುವ ಪಂಚನಾಮೆಯ ಪಂಚರೆಲ್ಲರು ಬೆಟಗೇರಿ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ವಂಶವೃಕ್ಷವನ್ನು ನಾವು ಮಾಹಿತಿ ಕೊಟ್ಟ ಪ್ರಕಾರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಲಾಟಿಯವರು ಗ್ರಾಮಕ್ಕೆ ಬಂದು ವಿಚಾರಣೆ ಮಾಡಿದ ಬಗ್ಗೆ ದಾಖಲೆ ಹಾಜರ ಮಾಡಿರುತ್ತೇನೆ. ವಂಶವೃಕ್ಷ ಪಡೆಯುವಾಗ ತಲಾಟಿಯವರಿಗೆ ಈ ದಾವೆಯ ಬಗ್ಗೆ ಮಾಹಿತಿ ಕೊಟ್ಟಿಲ್ಲ. ದಿಃ29/11/2025 ರಂದು ಈ ದಾವೆ ನಡೆಯುತ್ತಿರುವ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7. ಮಡ್ಡಿ ಬೀರಸಿದ್ದೇಶ್ವರ ನೀರು ಬಳಕೆದಾರರ ಸಂಘದ ನಿರ್ದೇಶಕ ನಾನೇ ಇರುತ್ತೇನೆ ಎಂದರೆ ಸರಿಯಲ್ಲ. ನಿಪಿ-36 ಪಡೆಯುವಾಗ ಖಾತೆದಾರರು ನಮ್ಮ ತಂದೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-36ನ್ನು ಪಡೆಯುವಾಗ ನಾವು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನಿಪಿ-36 ರಲ್ಲಿ ಪಾವತಿ ಮಾಡುವವರ ಹೆಸರು ಬಿ.ಬಿ.ಕೆ ಮತ್ತು ಎಸ್.ಕೆ.ಸಿ ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಬೇರೆಯವರ ಹೆಸರಿನಲ್ಲಿ ಇದ್ದ ರಸೀದಿಯನ್ನು ನಮಗೆ ಅನುಕೂಲ

ಆಗಲಿ ಎಂದು ಈ ದಾವೆಯಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾವು ಮಡ್ಡಿ ಬೀರಸಿದ್ದೇಶ್ವರ ನೀರು ಬಳಕೆದಾರರ ಸಂಘಕ್ಕೆ ಫೀ ಕಟ್ಟುತ್ತೇವೆ ಎಂದು ಎಲ್ಲಿಯು ಬರೆದಿಲ್ಲ ಎಂದರೆ ಸಾಕ್ಷಿದಾರರು ವಾದ ಪತ್ರದಲ್ಲಿ ಬರೆದಿದ್ದಾರೋ ಇಲ್ಲವೊ ಗೊತ್ತಿಲ್ಲ ಆದರೆ ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಲಾಗಿದೆ ಎಂದು ಹೇಳುತ್ತಾರೆ.

8. ನಿಪಿ-38 ರಲ್ಲಿ ನಮ್ಮ ತಂದೆಯ ಹೆಸರು ಇದೆ ಎಂದು ನನಗೆ ಗೊತ್ತಿದೆ. ನಿಪಿ-38 ರಲ್ಲಿ ಬೀರಪ್ಪ ಬಾಣಸಿ ಎಂದು ಬರೆದಿದ್ದು ಬಾಣಸಿ ಇರುವುದನ್ನು ಕಾಟ ಹಾಕಿ ಕುರಬೇಟ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಬಸವೇಶ್ವರ ಬೋರವೆಲ್‌ನಿಂದ ಬೋರ ಹಾಕಿಸದೇ ಇದ್ದರೂ ಸಹ ನಮಗೆ ಅನುಕೂಲ ಆಗಲಿ ಎಂದು ನಿಪಿ-38ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

9. ನಮ್ಮ ಮಾಲ್ಕೀಯ ಜಮೀನು ಸರ್ವೆ ನಂ.42/1+2/ಕ ಜಮೀನಿಗೆ ಸಂಬಂಧಪಟ್ಟ ಪೈಪ್ ಖರೀದಿ ಮಾಡಿದ್ದಕ್ಕೆ ನಿಪಿ-39 ಸಂಬಂಧಪಟ್ಟಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.42/1+2/ಕ ಜಮೀನು ನಮ್ಮ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸರಿ. ನಮ್ಮ ತಂದೆಯ ಜಮೀನಿಗೆ ಪೈಪ್ ಮತ್ತು ಇತರೇ ಸಾಮಗ್ರಿ ಖರೀದಿ ಮಾಡಿದ್ದರೂ ಸಹ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಸ್ತುಗಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ಸಕ್ಕರೆ ಕಾರಖಾನೆಯವರು ಕಬ್ಬು ಬೆಳೆದ ಜಮೀನಿಗೆ ಭೇಟಿ ಕೊಟ್ಟು ಆ ಜಮೀನಿನ ಕಬ್ಜೆಯಲ್ಲಿ ಯಾರು ಇದ್ದಾರೆ ಅದರ ಮಾಲೀಕರು ಯಾರು ಎಂದು ತಿಳಿದುಕೊಂಡು ನಂತರ ಅವರು ಆದೇಶ ಮಾಡಿದ ಮೇಲೆ ಕಬ್ಬು ಕಟಾವು ಮಾಡಿ ಕಳುಹಿಸಬೇಕು ಎಂದರೆ ಸರಿ. ದಿಃ 27/01/2024 ರಂದು ದಾವಾ ಆಸ್ತಿಯ ಉತಾರದಲ್ಲಿ ಮಾಯವ್ವ ಇವರ ಹೆಸರು ದಾಖಲ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕದಂದು ದಾವಾ ಆಸ್ತಿಯಲ್ಲಿ ಮಾಯವ್ವ ಇವರೇ ಕಬ್ಜೆಯಲ್ಲಿ ಇದ್ದರೂ ಸಹ ಸಕ್ಕರೆ ಕಾರಖಾನೆಯವರ ಜೊತೆ ಶಾಮೀಲಾಗಿ ಸುಳ್ಳು ರಸೀದಿಗಳನ್ನು ಸೃಷ್ಟಿ ಮಾಡಿ ಹಾಜರಪಡಿಸಿದ್ದೇನೆ ಎಂದರೆ ಸರಿಯಲ್ಲ.

11. ನಿಪಿ-40 ರಲ್ಲಿ ಸರ್ವೆ ನಂ.41 ಎಂದು ಕೈಬರಹದಿಂದ ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ-41 ಮೂಲ ಬಿಲ್ಲು ಅಲ್ಲ ಎಂದರೆ ಸರಿಯಲ್ಲ. ನಿಪಿ-41 ರಲ್ಲಿ ಜಿ.ಎಸ್.ಟಿ. ನಂಬರ ನಮೂದಿಸಿಲ್ಲ ಎಂದರೆ ಸರಿ. ಬೀಜ ಖರೀದಿ ಮಾಡಿದ ರಸೀದಿಯಲ್ಲಿ ಬೀಜ ಖರೀದಿ ಮಾಡಿದವರ ಸಹಿ ಮತ್ತು ಅಂಗಡಿಯ ಸೀಲ್ ಇರುವುದಿಲ್ಲ ಎಂದರೆ ಸಾಕ್ಷಿದಾರರು ಸದರಿ ರಸೀದಿ ತಮ್ಮ ತಂದೆ ತುಂಬಿದ್ದಾಗಿ ಹೇಳುತ್ತಾರೆ. ಇನ್ನೊಂದು ಬೀಜ ಖರೀದಿ ಮಾಡಿದ ರಸೀದಿಯಲ್ಲಿ ಸಹಿ ಹಾಗೂ ಅಂಗಡಿಯ ಸೀಲ್ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-36 ರಿಂದ 41 ರ ದಾಖಲೆಗಳನ್ನು ನಮಗೆ ಅನುಕೂಲ ಆಗುವ ರೀತಿಯಲ್ಲಿ ಸೃಷ್ಟಿ ಮಾಡಿಕೊಂಡು ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ.

12. ಸತ್ತಿಗೇರಿ ಗ್ರಾಮದಲ್ಲಿ ಬಾಳವ್ವ ಸಿದ್ರಾಮಪ್ಪ ಹೆಗಡೆ ಇವರ ಹೆಸರಿನಲ್ಲಿ 03ಎ-09ಗು ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಾಳವ್ವ ಇವರು ತೀರಿಕೊಂಡು ನಂತರ ಅವರ ಮಕ್ಕಳಾದ ಲಕ್ಷ್ಮವ್ವ, ಮಾಯವ್ವ ಮತ್ತು ಗಂಗವ್ವ ವಾರಸುದಾರರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ವಾರಸಾ ಆಗಬೇಕಾದ ಸಮಯದಲ್ಲಿ ಅಪ್ರಾಪ್ತ ವಯಸ್ಕರು ಇದ್ದುದ್ದರಿಂದ ಅವರ ಅಜ್ಜಿ ಸಿದ್ದವ್ವ ಸಂರಕ್ಷಣೆದಾರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

13. ದಿಃ 18/05/1959 ರಂದು ಮಾಯವ್ವ ಮತ್ತು ಗಂಗವ್ವ ಇವರು ಸದರಿ ಜಮೀನನ್ನು ನಾಗಪ್ಪ ಫಕೀರಪ್ಪ ಹೊನಕುಪ್ಪಿ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 28/06/2020 ರಂದು ದಾವಾ ಆಸ್ತಿಯಲ್ಲಿ ಮಾಯವ್ವ ಇವರು ಗೋಕುಲ್ ಬೋರವೆಲ್ ಸಂಘದಿಂದ ಬೋರವೆಲ್ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಬೋರವೆಲ್‌ಗೆ ಹೆಸ್ಕಾಂದಿಂದ ವಿದ್ಯುತ್ ಸಂಪರ್ಕ ಪಡೆದಿದ್ದಾರೆ ಎಂದರೆ ತಾವು ಪಡೆದಿದ್ದಾಗಿ ಹೇಳುತ್ತಾರೆ. ಸುಳ್ಳು ದಾಖಲೆಗಳನ್ನು ಹಾಜರಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಶ್ರೀ.ಎಮ್.ವಾಯ್.ಜೆ. ಪ್ರತಿವಾದಿ 2ಎ ಯಿಂದ 2ಇ ರವರ ಪರ ವಕೀಲರಿಂದಃ</u>**

1ನೇ ಪ್ರತಿವಾದಿ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಪಿ.ಡಬ್ಲ್ಯೂ-2 (ಬೀರಪ್ಪ)

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ